

‘ಏನು ಮಾಡ್ತಾಳೆ ಗೊತ್ತಿಲ್ಲ. ಅವರೊಂಥರ ಜನ. ಬಿಡಿ ಸಾರ್, ಅವ್ರ ವಿಷ್ಯ ಮಾತಾಡಿದ್ರೆ ನಮ್ ಮರ್ಯಾದೆ ಹಾಳು’

ಕೃಷ್ಣಪ್ಪ ಮಾತು ಮುಂದುವರಿಸಲಿಲ್ಲ. ರಾಜು ಹೇಳಿದಂತೆ ಕೆಲವು ದಿನಗಳಾದ ಮೇಲೆ ಸಾವಿತ್ರಿ ಬಂದಳು. ಚಪ್ಪಡಿ ಹಾಕಿಸಿದ್ದೇನೆ ಅಂದಳು. ಕೃಷ್ಣಪ್ಪ ನೋಡಲು ಹೋದರು. ರಾಜುವನ್ನು ಕರೆದುಕೊಂಡು ಹೋಗಲು ಇಷ್ಟವಾಗಲಿಲ್ಲ. ಸಾವಿತ್ರಿ ಚಾವಣಿಗೆ ತಕ್ಕ ಮಟ್ಟಿನ ಬಂದೋಬಸ್ತ್ ಮಾಡಿ, ನೆಲಕ್ಕೆ ಚಪ್ಪಡಿಗಳನ್ನು ಜೋಡಿಸಿದ್ದಳು. ಅಷ್ಟೇನೂ ಸರಿ ಇಲ್ಲದಿದ್ದರೂ, ಅವಳ ಉಮೇದು ನೋಡಿ ಕೃಷ್ಣಪ್ಪಗೆ ಸಾಲ ಕೊಡಬೇಕು ಅನ್ನಿಸಿತು. ಸಾಲ ಕೊಡಲು ಹಸು ಸಾಕಾಣಿಕೆಯ ತಿಳಿವಳಿಕೆ ಬೇಕು. ಎಮ್ಮೆ ಸಾಕಿದ ಅನುಭವ ಸಾಲುತ್ತಿರಲಿಲ್ಲ. ಸಾವಿತ್ರಿಯನ್ನು ಕೊಟ್ಟೂರಿನಲ್ಲಿ ನಡೆಯುವ ಮೂರು ದಿನಗಳ ತರಬೇತಿ ಶಿಬಿರಕ್ಕೆ ಕಳಿಸುವ ವ್ಯವಸ್ಥೆ ಮಾಡಿದರು. ತರಬೇತಿ ಪೂರ್ಣಗೊಳಿಸಿ ಸರ್ಟಿಫಿಕೇಟ್ ತಂದು ತೋರಿಸಿದ ಬಳಿಕ ಸಾಲ ಮಂಜೂರು ಮಾಡಿ, ಲೋನ್ ಪೇಪರ್ಸಿಗೆ ಹೆಬ್ಬೆಟ್ಟು ಹಾಕಿಸಿಕೊಂಡರು. ಹಸು ಸಾಲದ ನಿಯಮದಂತೆ ಸಂತೆಯಲ್ಲಿ ಹಸು ಕೊಳ್ಳಬೇಕು. ಹಳೆ ಊರಲ್ಲಿ ಪ್ರತಿ ವಾರ ಎರಡು ಸಂತೆಗಳು ನಡೆಯುತ್ತವೆ. ಬುಧವಾರ ಕುರಿ ಸಂತೆಯಾದರೆ, ಗುರುವಾರ ಜಾನುವಾರು ಸಂತೆ. ಜಾನುವಾರು ಸಂತೆಗೆ ಹೋಗಿ ತಮಗೆ ಸರಿ ಹೊಂದುವ ಎಚ್‌ಎಫ್ ಅಥವಾ ಜೆರ್ಸಿ ಹಸುವನ್ನು ಆಯ್ಕೆ ಮಾಡಬೇಕು. ಸಾಲದ ಹಣವನ್ನು ಸಾಲಗಾರರಿಗೆ ಕೊಡುವಂತಿಲ್ಲ. ನೇರವಾಗಿ ಹಸು ಮಾರಾಟ ಮಾಡಿದವರಿಗೆ ಕೊಡುತ್ತಾರೆ. ಸಂತೆಗೆ ನೂರಾರು ಹಸುಗಳು ಬರುತ್ತವೆ. ದಲ್ಲಾಳಿಗಳು, ಮಾರಾಟಗಾರರ ಗೌಜು ಗದ್ದಲ; ಮೂಕಪ್ರಾಣಿಗಳ ಹೆಸರಲ್ಲಿ ಬಾಯುಳ್ಳವರ ಆಟ. ಎಲ್ಲಾ ಬಗೆಯ ಮೋಸ, ಅವ್ಯವಹಾರಗಳು ನಡೆಯುತ್ತವೆ. ಕಾಯಿಲೆ ಇದ್ದರೂ ಹೇಳುವುದಿಲ್ಲ; ಸರಿಯಾಗಿ ಹಾಲು ಕೊಡದ ಹಸು ಇಪ್ಪತ್ತು, ಮುವ್ವತ್ತು ಲೀಟರ್ ಕೊಡುತ್ತದೆಂದು ಮಾರಾಟ ಮಾಡುತ್ತಾರೆ. ಮಾರುವಾತ ಮತ್ತು ದಲ್ಲಾಳಿ ಟವೆಲ್ ಒಳಗೆ ಕೈ ತೂರಿಸಿ, ಬೆರಳು ಮಡಚುವ ನಾಟಕವೂ ಇದೆ. ಬೆರಳಿಗೆ ಐದು, ಹತ್ತು ಎಂದು ಲೆಕ್ಕ ಹಾಕಿಕೊಳ್ಳುವವರಿಗೆ ತಿಳಿಯದಂತೆ ಮೋಸ ಮಾಡುತ್ತಾರೆ.

ಗ್ರಾಮೀಣಾಭಿವೃದ್ಧಿ ಅಧಿಕಾರಿ ಇದ್ದಾಗ ಕೃಷ್ಣಪ್ಪ ಸಂತೆಗೆ ಹೋಗುತ್ತಿರಲಿಲ್ಲ. ಅವರೇ ಮಾರುವವರ, ಕೊಳ್ಳುವವರ ನಡುವೆ ವ್ಯವಹಾರ ಕುದುರಿಸುತ್ತಿದ್ದರು.

